ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.   3709/2022

ಸಿ.ಡಬ್ಲ್ಯೂ -05
ಪಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರು  :-  ಅಶೋಕ
ತಂದೆಯ   ಹೆಸರು  :-  ಸಿದ್ದೇಗೌಡ
ವಯಸ್ಸು  :-  45 ವರ್ಷ
ಉದ್ಯೋಗ  :-  ವ್ಯವಸಾಯ
ವಾಸ  :-  ಚಲಮಸಂದ್ರ

**ಸಾಕ್ಷಿಗೆ ದಿಃ 12.11.2025ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸ್ಥಳಪಂಚನಾಮೆಗೆ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು 05.03.2022 ರಂದು ಸಂಜೆ 5 ರಿಂದ 6 ಗಂಟೆಯ ಸಮಯದಲ್ಲಿ ಚಾಸಾ 1 ಅವರ ಮನೆಯ ಬಳಿ ಪೋಲಿಸರು ಬಂದಾಗ ಮಾಡಿರುತ್ತೇನೆ.  ಆ ದಿನ ನನ್ನ ಚಾಸಾ 6 ಸಹ ಇದ್ದರು.  ಚಾಸಾ 1 ಅವರು ಸ್ಥಳವನ್ನು ತೋರಿಸಿ ಒಂದು ಕಲ್ಲನ್ನು ತಂದು ಹಾಜರುಪಡಿಸಿದ್ದು ಅದನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿ. ಪಿ 2 ಎಂದು ಗುರುತಿಸಲಾಗಿದ್ದು ಸಹಿ ನಿ.ಪಿ 2(ಬಿ) ಎಂದು ಗುರುತಿಸಲಾಯಿತು. ಮು. ಮಾ. ಅನ್ನು ಗುರುತಿಸುತ್ತೇನೆ ಅದನ್ನು ಮು. ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ವಾಯ್.ಜಿ.ಎಸ್ಃ ವಕೀಲರಿಂದಃ**

ಪೋಲಿಸರು ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲವೆಂದರೆ ಸಾಕ್ಷಿ ನಾನೇ ಓದಿ ಸಹಿ ಮಾಡಿರುತ್ತೇನೆಂದು ಹೇಳುತ್ತಾರೆ. ಮಹಜರ ಸಮಯದಲ್ಲಿ 10 ರಿಂದ 45 ಜನ ಸೇರಿದ್ದರು. ಪೋಲಿಸರು ನನಗೆ ಪಂಚರಾಗಿ ಬರುವಂತೆ ನೋಟಿಸ್ ನೀಡಿರುತ್ತಾರೆ. ನನಗೆ ದಿಃ 05.03.2022 ರಂದು ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಬಂದು ನನಗೆ ನೋಟಿಸ್ ನೀಡಿರುತ್ತಾರೆ. ನೋಟಸ್ ನಲ್ಲಿ ಏನಾದರೂ ಬರೆದಿತ್ತಾ ಅಥವಾ ಖಾಲಿ ಇತ್ತಾ ಎಂದರೆ ಸಾಕ್ಷಿ ಬರೆದಿತ್ತು ಎಂದು ಹೇಳುತ್ತಾರೆ. ನನಗೆ ಪೋಲಿಸರು ಯಾವುದೇ ನೋಟಿಸ್ ನೀಡಿಲ್ಲ ಮಹಜರಗೆ ಸಾಕ್ಷಿಯಾಗಿ ಸಹಿ ಪಡೆದಿಲ್ಲ ನಾನು ಚಾಸಾ 1 ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ 6 ಅವರು ಸಿದ್ದೇಗೌಡ ಅವರ ವಿರುದ್ದ ಚುನಾವಣೆಯಲ್ಲಿ ಗೆದ್ದಿದ್ದು ಅವರ ವಿರುದ್ದ ಮತ ಹಾಕಿದ ಆರೋಪಿತರ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿದ್ದು ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು. ಮಾ. ಅನ್ನು ಚಾಸಾ 1 ಅವರೆ ಪೊಲೀಸರಿಗೆ ಮನೆಯ ಮುಂದಿ ಬಿದ್ದಿದ್ದ ಕಲ್ಲನ್ನು ಕಂದು ನೀಡಿರುತ್ತಾರೆ ಎಂದರೆ ಸಾಕ್ಷಿ ಸ್ವ ಇಚ್ಚೆಯಿಂದ ಅದೇ ಕಲ್ಲಿನಿಂದ ಹೊಡೆದಿರುತ್ತಾರೆಂದು ನುಡಿಯುತ್ತಾರೆ. ಮು. ಮಾ. ನ ಮೇಲೆ ಪೋಲಿಸರು ನನ್ನ ಹಾಗೂ ಚಾಸಾ 1 ಅವರು ಸಹಿ ಪಡೆದಿರುವುದಿಲ್ಲ. ಮು. ಮಾ. ಗೆ ವಿಶಿಷ್ಟ ಗುರುತು ಹಾ ನನ್ನ ಸಹಿ ಪಡೆದಿರುವುದಿಲ್ಲ.

ನಾನು ವ್ಯವಸಾಯ ಮತ್ತು ಅಂಗಡಿ ವ್ಯಾಪಾರ ಮಾಡುತ್ತೇನೆ. ನನ್ನದು ಚಿಲ್ಲರೇ ಅಂಗಡಿ ಇರುತ್ತದೆ. ನಾನು ನನ್ನ ಅಂಗಡಿಯಲ್ಲಿ ಮದ್ಯ ವ್ಯಾಪಾರ ಮಾಡುತ್ತೇನೆ ನನ್ನ ಅಂಗಡಿ ಜನ ಸೇರಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ಚನ್ನಾಗಿದ್ದೇನೆ. ನನಗೆ ಗಲಾಟೆ ಆದ ಬಗ್ಗೆ ಗೊತ್ತಿಲ್ಲ ಆದರೆ ಪೋಲಿಸರು ಮಹಜರಗೆ ಬಂದಾಗ ಸಹಿ ಮಾಡಿರುತ್ತೇನೆ. ನಾನು ಯಾವುದೇ ಮಹಜರಗೆ ಸಹಿ ಮಾಡಿರುವುದಿಲ್ಲ ಪೋಲಿಸರು ನಮ್ಮ ಊರಿಗೆ ಮಹಜರಗೆ ಬಂದಿರುವುದಿಲ್ಲ ಚಾಸಾ 1 ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲಿಸರು ಬೀಟ್ ಗೆ ಬಂದಾಗ ನಾನು ಸಹಿ ಮಾಡಿರುತ್ತೇನೆ ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.